**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅ. ದೇವೇಗೌಡ ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ**

**ವಿಷಯ:** ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ವ್ಯಾಪ್ತಿಗೆ ಬರುವ ಚಂದಾಪುರದಲ್ಲಿ ಅನೇಕ ನಿವೇಶನಗಳು, ದೊಡ್ಡ ಕೈಗಾರಿಕೆಗಳು, ಬಹು ಅಂತರಾಷ್ಟ್ರೀಯ ಕಂಪನಿಗಳು, ವಾಣಿಜ್ಯ ಮಳಿಗೆಗಳು ಇರುತ್ತದೆ. ಈ ಭಾಗದಲ್ಲಿ ಬೆಸ್ಕಾಂಗೆ ಸಂಬಂಧಿಸಿದ ಯಾವುದೇ ಸಮಸ್ಯೆ, ಕುಂದುಕೊರತೆ ಮತ್ತು ಪತ್ರ ವ್ಯವಹಾರಗಳನ್ನು ಮಾಡಬೇಕಾದಲ್ಲಿ ಚಂದಾಪುರ ಬೆಸ್ಕಾಂ ಉಪ ವಿಭಾಗದಿಂದ ಆಡಳಿತಾತ್ಮಕವಾಗಿ ಕೆಲಸ ಕಾರ್ಯಗಳು ಆಗದೆ ಪ್ರತಿ ಬಾರಿಯೂ ರಾಮನಗರದಲ್ಲಿರುವ ಬೆಸ್ಕಾಂ ವಿಭಾಗದ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ತಿಳಿಸಿ ಎಲ್ಲಾ ಅನುಮತಿ ಹಾಗೂ ಮಂಜೂರಾತಿ ಪಡೆಯಬೇಕಾಗಿರುತ್ತದೆ. ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ವ್ಯಾಪ್ತಿಗೆ ಬರುವ ಚಂದಾಪುರ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರರ ಉಪ ವಿಭಾಗವನ್ನು ಬೆಂಗಳೂರು ನಗರ ಬೆಸ್ಕಾಂ ಕಾರ್ಯಪಾಲಕ ಅಭಿಯಂತರರ ಕಛೇರಿಯ ವ್ಯಾಪ್ತಿಗೆ ಒಳಪಡಿಸಿದ್ದಲ್ಲಿ ಈ ಭಾಗದ ಸ್ಥಳೀಯ ನಿವೇಶನದಾರರಿಗೆ, ಕೈಗಾರಿಕೆಗಳಿಗೆ ಅನುಕೂಲವಾಗುತ್ತದೆ. ಆದ್ದರಿಂದ ಸದರಿ ಚಂದಾಪುರ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರರ ಉಪ ವಿಭಾಗವನ್ನು ಬೆಂಗಳೂರು ನಗರ ಬೆಸ್ಕಾಂ ಕಾರ್ಯಪಾಲಕ ಅಭಿಯಂತರರ ಕಛೇರಿಯ ವ್ಯಾಪ್ತಿಗೆ ತರಬೇಕೆಂದು ಕೋರಿ.

* * * * *

ಬೆಸ್ಕಾಂನ ಚಂದಾಪುರ ಉಪವಿಭಾಗದ ಆಡಳಿತಾತ್ಮಕ ನಿಯಂತ್ರಣವು, ಚಂದಾಪುರ ವಿಭಾಗಕ್ಕೆ ಒಳಪಟ್ಟಿರುತ್ತದೆ ಹೊರತು ರಾಮನಗರ ವಿಭಾಗಕ್ಕೆ ಒಳಪಟ್ಟಿರುವುದಿಲ್ಲ.

ರಾಮನಗರ ವಿಭಾಗ ಹಾಗೂ ಚಂದಾಪುರ ವಿಭಾಗಗಳು ರಾಮನಗರ ವೃತ್ತ ಕಛೇರಿ ವ್ಯಾಪ್ತಿಗೆ ಒಳಪಟ್ಟಿದ್ದು, ರಾಮನಗರ ವೃತ್ತ ಕಛೇರಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಕೆಂಗೇರಿಯಲ್ಲಿರುತ್ತದೆ.

ಚಂದಾಪುರ ವಿಭಾಗ ಕಛೇರಿಯ ವಿಳಾಸ ಕೆಳಕಂಡಂತಿರುತ್ತದೆ:-
ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್),
ಕಾರ್ಯ ಮತ್ತು ಪಾಲನ ವಿಭಾಗ, ಬೆವಿಕಂ,
2ನೇ ಹಂತ, ಸೂರ್ಯನಗರ ಸಿಟಿ ಹತ್ತಿರ,
ಬನ್ನಹಳ್ಳಿ ರಸ್ತೆ, ಚಂದಾಪುರ, ಬೆಂಗಳೂರು 560099.

...2

ಭೌಗೋಳಿಕವಾಗಿ ಚಂದಾಪುರ ಉಪ ವಿಭಾಗ ಮತ್ತು ಚಂದಾಪುರ ವಿಭಾಗ ಕಛೇರಿಗಳು ಕೂಡಾ ಕೈಗಾರಿಕಾ ಪ್ರದೇಶ ವ್ಯಾಪ್ತಿಯಲ್ಲಿ ಇರುವುದರಿಂದ ಗ್ರಾಹಕರಿಗಾಗಲೀ ಕೈಗಾರಿಕಾ ಉದ್ಯಮಿಗಳಿಗಾಗಲೀ ಆಡಳಿತಾತ್ಮಕ ದೃಷ್ಟಿಯಿಂದ ದೈನಂದಿನ ಕೆಲಸ ಕಾರ್ಯ/ ಸೇವೆಗಳನ್ನು ಒದಗಿಸುವಲ್ಲಿ ಯಾವುದೇ ಅನಾನುಕೂಲವಾಗುತ್ತಿಲ್ಲ.

ಸಂಖ್ಯೆ: ಎನರ್ಜಿ 57 ಇಬಿಎಸ್ 2023

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು